ದಿನಾಂಕಃ 23.01.2025ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ವಾದಿಯರ ಪರ ಶ್ರೀ ಬಿ ಕೆ ಜೆ ವಕೀಲರಿಂದಃ**

ದಾವಾಸ್ತಿಗಳಲ್ಲಿ ವಾದಿ ಮನೆ ಕಟ್ಟಿಕೊಂಡಿರುತ್ತಾನೆಂದರೆ ಸಾಕ್ಷಿಯು ದಾವಾಸ್ತಿಗಳನ್ನು ಬಿಟ್ಟು ಬೇರೆ ಒಂದು ಗುಂಟೆ ಜಮೀನಿನಲ್ಲಿ ಮನೆಯನ್ನು ಕಟ್ಟಿಸಿರುತ್ತಾನೆಂದು ನುಡಿಯುತ್ತಾರೆ. ಸದರಿ ಮನೆಯು ಸರ್ವೆ ನಂಬರ-20 ರ ಬೇರೆ ಜಾಗೆಯಲ್ಲಿ ಬರುತ್ತದೆ. ಆ ಬಗ್ಗೆ ನನ್ನ ಬಾಯಿ ಹೇಳಿಕೆಯನ್ನು ಹೊರತುಪಡಿಸಿ ದಾಖಲೆ ಇರುವುದಿಲ್ಲ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನಾನು ಈ ರೀತಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ದಾವಾ ಜಮೀನಿನಲ್ಲಿ ವಾದಿ ಸಾಲವನ್ನು ಸಹ ಪಡೆದಿರುತ್ತಾನೆಂದರೆ ಸಾಕ್ಷಿಯು ನಾವು ಸಾಲ ಪಡೆದಿರುತ್ತೇವೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ-4 ನ್ನು ತೋರಿಸಿ ಅದರಲ್ಲಿ ಸಾಲ ಪಡೆದ ಬಗ್ಗೆ ನಮೂದು ಇರುತ್ತದೆ ಎಂದರೆ ಸಾಕ್ಷಿಯು ನಮಗೆ ಹಕ್ಕು ಪತ್ರದ ಮೂಲಕ ಸದರಿ ಆಸ್ತಿಯನ್ನು ಬಿಟ್ಟು ಕೊಡುವ ಮುಂಂಚಿತವಾಗಿ ಪಡೆದ ಸಾಲ ಇರುತ್ತದೆಂದು ನುಡಿಯುತ್ತಾರೆ. ಸದರೀ ಸಾಲವನ್ನು ವಾದಿ ತುಂಬಿರುತ್ತಾನೆ. ಸದರೀ ಸಾಲವನ್ನು ಹಕ್ಕು ಪತ್ರ ಮಾಡಿಕೊಡುವ ಮುಂಚಿತವಾಗಿಯೇ ತುಂಬಿರುತ್ತಾನೆ. ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಿದ್ದೇನೆ. ಯಾವ ದಿನದಂದು ಸಾಲ ತುಂಬಿರುತ್ತಾನೆಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ ಆದರೆ ನಾವು ಸನ್ 2002 ರಲ್ಲಿ ಸಾಲ ಪಡೆದಿರುತ್ತೇವೆ ಎಂದು ನುಡಿಯುತ್ತಾರೆ. ನಿಪಿ-5 ರಲ್ಲಿಯೂ ಸಹ ವಾದಿ ಸಾಲವನ್ನು ಪಡೆದ ಬಗ್ಗೆ ಋಣಭಾರ ಇರುತ್ತದೆಂದರೆ ಸಾಕ್ಷಿಯು ಪುನಃ

ನಮಗೆ ಹಕ್ಕು ಪತ್ರದ ಮೂಲಕ ಸದರಿ ಆಸ್ತಿಯನ್ನು ಬಿಟ್ಟು ಕೊಡುವ ಮುಂಂಚಿತವಾಗಿ ಪಡೆದ ಸಾಲ ಇರುತ್ತದೆಂದು ನುಡಿಯುತ್ತಾರೆ.

ಜಂಟಿ ಅಪಸಾತ ವಾಟ್ನಿ ಪತ್ರವು ನೊಂದವಾಗಿರುವುದಿಲ್ಲ. ದಾವಾಸ್ತಿಗೆ ಸಂಬಂಧಿಸಿದಂತೆ ನಮಗೆ ಹಕ್ಕುಬಿಟ್ಟ ಪತ್ರದ ಮೂಲಕ ಹಕ್ಕು ಬಂದಿರುತ್ತದೆ ಎಂದು ನುಡಿಯುತ್ತಾರೆ. ನಿಡಿ-1 ಮತ್ತು 2 ರಲ್ಲಿ ಹಕ್ಕುಬಿಟ್ಟ ಪತ್ರದ ಮೂಲಕ ಹಕ್ಕು ಪ್ರಾಪ್ತವಾಗಿರುವ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ನಾವು ದಾವಾಸ್ತಿಯ ಮೇಲೆ ಸಾಲ ಪಡೆಯುವ ಕಾಲಕ್ಕೆ ವಾದಿಗೆ ನೋಟೀಸು ಕೊಟ್ಟಿರುವುದಿಲ್ಲ ಏಕೆಂದರೆ ಅದರ ಅವಶ್ಯಕತೆ ಇರಲಿಲ್ಲ. ಸರ್ವೆ ನಂಬರ-20/1 ರಲ್ಲಿಯ 03 ಎಕರೆ 34 ಗುಂಟೆ ಜಮೀನು ನಿಮ್ಮ ಹಿರಿಯರ ಆಸ್ತಿ ಇರುತ್ತದೆಯಾ? ಎಂದರೆ ಸಾಕ್ಷಿಯು ಆ ಕ್ಷೇತ್ರದ ಜಮೀನು ಸರ್ವೆ ನಂಬರ-20/1 ರಲ್ಲಿ ಇರುವುದಿಲ್ಲ ಎಂದು ಹೇಳುತ್ತಾರೆ. ಆ ಬಗ್ಗೆ ನನ್ನ ಪ್ರತಿವಾದ ಪತ್ರ ಖಂಡಿಕೆ 20 ರಲ್ಲಿ ಬರೆಸಿರುವ ಸಂಗತಿ ಸರಿ ಇರುವುದಿಲ್ಲ . ವಾದಿಗೆ ದಾವಾಸ್ತಿಯಲ್ಲಿರುವ ಬಾವಿ ಮತ್ತು ಬೋರವೆಲ್ ನಲ್ಲಿ ಯಾವುದೇ ಹಕ್ಕು ಇರುವುದಿಲ್ಲ. ಸದರಿ ಬಾವಿ ಮತ್ತು ಬೋರವೆಲ್ ಗೆ ವಿದ್ಯುತ್ ಸಂಪರ್ಕವನ್ನು ಯಾರು ಪಡೆದಿರುತ್ತಾರೆಂದರೆ ಸಾಕ್ಷಿಯು ಸದರಿ ಸರ್ವೆ ನಂಬರನಲ್ಲಿ ಯಾವುದೇ ಬಾವಿ ಇರುವುದಿಲ್ಲ , ಬೋರವೆಲ್ಗೆ ನಮ್ಮ ತಂದೆ ವಿದ್ಯುತ್ ಸಂಪರ್ಕ ಪಡೆದಿರುತ್ತಾರೆ. ಸದರೀ ಬೋರವೆಲ್ ಗೆ ವಾದಿಯೇ ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದು, ಆತನ ಹೆಸರಿಗೆ ದಾಖಲೆ ಇರುತ್ತದೆ ಎಂದರೆ ಸರಿಯಲ್ಲ.

ವಾದಿ ತನ್ನ ಹೆಣ್ಣು ಮಕ್ಕಳ ಮದುವೆಯನ್ನು ತಾನೇ ಮಾಡಿರುತ್ತಾನೆಂದರೆ ನಿಜ. ವಾದಿ ಎಲ್ಲಿ ವಾಸಿಸುತ್ತಿದ್ದಾನೆಂದರೆ ಸಾಕ್ಷಿಯು ತಾನು ಕಟ್ಟಿಕೊಂಡ ಮನೆಯಲ್ಲಿ ವಾಸಿಸುತ್ತಿದ್ದಾನೆಂದು ನುಡಿಯುತ್ತಾರೆ. ಎಷ್ಟು ದಿವಸಗಳಿಂದ ಆತ ಆ ಮನೆಯಲ್ಲಿ

ವಾಸವಾಗಿದ್ದಾನೆಂದರೆ ನನಗೆ ಗೊತ್ತಿಲ್ಲ. ಆತನ ಊಟೋಪಚಾರ ಯಾರು ನೋಡಿಕೊಳ್ಳುತ್ತಿದ್ದಾರೆಂದರೆ ಸಾಕ್ಷಿಯು ಆತನ ಮಗಳು ಮತ್ತು ಅಳಿಯ ನೋಡಿಕೊಳ್ಳುತ್ತಾರೆಂದು ನುಡಿಯುತ್ತಾರೆ. ನಾವು ಆತನ ಔಷದೋಪಚಾರವನ್ನು ನೋಡಿಕೊಂಡಿರುವುದಿಲ್ಲ ಎಂದರೆ ನಿಜ. ನಮ್ಮ ಪ್ರತಿವಾದ ಪತ್ರದ ಖಂಡಿಕೆ-24 ರಲ್ಲಿ ಹೇಳಿದಂತೆ ವಾದಿಗೆ ನಾವೇ ಆಹಾರವನ್ನು ಹಾಗೂ ಔಷದೋಪಚಾರವನ್ನು ಮಾಡುತ್ತಿರುವ ಸಂಗತಿಗಳು ನಮ್ಮ ದೊಡ್ಡಮ್ಮ ಇದ್ದಾಗ ಮಾಡಿರುವ ಸಂಗತಿಗಳು ಎಂದು ನುಡಿಯುತ್ತಾರೆ. ನಮ್ಮ ದೊಡ್ಡಮ್ಮ ಯಾವಾಗ ತೀರಿಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ. ನಮ್ಮ ದೊಡ್ಡಮ್ಮ ಇರುವಾಗ ವಾದಿಯನ್ನು ನಾವೇ ನೋಡಿಕೊಳ್ಳುತ್ತಿದ್ದೆವು ಎಂದು ನಿಮ್ಮ ತಕರಾರಿನಲ್ಲಿ ಬರೆಸಿರುತ್ತೀರಾ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. ನಮ್ಮ ತಕರಾರಿನಲ್ಲಿ ಹೇಳಿದಂತೆ ವಾದಿಯು ಹಕ್ಕು ಬಿಟ್ಟ ಪತ್ರ ವನ್ನು ಬರೆದುಕೊಟ್ಟಿರುತ್ತಾನೆಂದು ಯಾವುದಾದರೂ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ? ಎಂದರೆ ಸಾಕ್ಷಿಯು ಹಾಜರುಪಡಿಸಿರುತ್ತೇನೆಂದು ನುಡಿಯುತ್ತಾರೆ. ಆ ಬಗ್ಗೆ ಯಾವ ಕಾಗದವನ್ನು ಹಾಜರುಪಡಿಸಿರುತ್ತೀರಿ ಎಂದು ಹೇಳಬಲ್ಲಿರಾ? ಎಂದರೆ ಸಾಕ್ಷಿಯು ನಾನು ಸಾಕಷ್ಟು ದಾಖಲೆಗಳನ್ನು ಹಾಜರುಪಡಿಸಿದ್ದು, ಯಾವುದು ಇರುತ್ತದೆಂದು ಹೇಳಲು ಆಗುವುದಿಲ್ಲ. ಸದರಿ ಹಕ್ಕು ಬಿಟ್ಟ ಪತ್ರ ನೊಂದು ಆಗಿರುವುದಿಲ್ಲ. ಸದರೀ ಪತ್ರ ವನ್ನು ಮಾಡಿದ ದಿನಾಂಕವನ್ನು ನನಗೆ ಹೇಳಲು ಆಗುವುದಿಲ್ಲ. ಸದರೀ ಪತ್ರದ ದಿನಾಂಕವನ್ನು ಬರೆಸಿರುತ್ತೀರಾ? ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಸದರಿ ಹಕ್ಕು ಬಿಟ್ಟ ಪತ್ರವನ್ನು ಜಮೀನಿಗೆ ಸಂಬಂಧಿಸಿದಂತೆ ಮಾತ್ರ ಬರೆದುಕೊಟ್ಟಿರುತ್ತಾನೆ. ಸದರೀ ಪತ್ರವು ಕೊಳವೆ ಬಾವಿಗೂ ಸಹ ಸಂಬಂಧಿಸಿರುತ್ತದೆ. ನನ್ನ ಪ್ರತಿವಾದ ಪತ್ರದಲ್ಲಿ ಮನೆಗೂ ಸಂಬಂಧಿಸಿದಂತೆ ಸದರೀ ಹಕ್ಕು ಬಿಟ್ಟ ಪತ್ರ ಬರೆದುಕೊಟ್ಟಿರುವ ಬಗ್ಗೆ ಹೇಳಿರುತ್ತೇನೆಂದರೆ ಸರಿಯಲ್ಲ.

ದಾವಾಸ್ತಿಗೆ ಸಂಬಂಧಿಸಿದಂತೆ ನಮ್ಮ ಹೆಸರು ದಾಖಲಿಸಿಕೊಳ್ಳುವಾಗ ವಾದಿಗೆ ನೋಟೀಸು ಕೊಟ್ಟಿರುತ್ತೀರಾ? ಎಂದರೆ ಸಾಕ್ಷಿಯು ಅದರ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ನಮ್ಮ ತಂದೆ ತೀರಿಕೊಂಡ ನಂತರ ದಾವಾಸ್ತಿಗಳೆ ನಮ್ಮ ಹೆಸರುಗಳನ್ನು ದಾಖಲಿಸಿಕೊಳ್ಳುವಾಗ ವಾದಿಗೆ ನೋಟಿಸು ಕೊಟ್ಟಿರುವುದಿಲ್ಲ.

ವಾದಿ ಅನಕ್ಷರಸ್ಥನಿದ್ದು, ಮುಗ್ಧ ವ್ಯಕ್ತಿಯಾಗಿದ್ದು, ಆತನಿಗೆ ಯಾವುದೇ ವ್ಯವಹಾರದ ಜ್ಞಾನ ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ದಾವಾಸ್ತಿಯ ಮೇಲೆ ಪಡೆದಿರುವ ಸಾಲದ ಬಗ್ಗೆ ವಾದಿಗೆ ತಿಳಿದಿರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನೀವು ದಾವಾಸ್ತಿಗೆ ಹಕ್ಕುಬಿಟ್ಟ ಪತ್ರದ ಮೇರೆಗೆ ಮಾಲೀಕತ್ವ ಕೇಳುತ್ತಿರುವಿರೋ ಅಥವಾ ವಾಟ್ನಿ ಪತ್ರದ ಮೂಲಕ ಕೇಳಿರುತ್ತಿರುವಿರೋ ಅಥವಾ ಪ್ರತಿಕೂಲ ಸ್ವಾ ಧೀನತೆ ಮೇರೆಗೆ ಕೇಳಿರುತ್ತಿರುವಿರೋ ಎಂದರೆ ಸಾಕ್ಷಿಯು ನಾವು ದಾವಾಸ್ತಿಗೆ ಹಕ್ಕುಬಿಟ್ಟ ಪತ್ರದ ಮೂಲಕ ಮಾಲೀಕತ್ವ ಕೇಳುತ್ತಿದ್ದೇವೆ ಎಂದು ನುಡಿಯುತ್ತಾರೆ. ನಾನು ಹೇಳಿದಂತೆ ವಾದಿ ಯಾವುದೇ ಹಕ್ಕು ಬಿಟ್ಟ ಪತ್ರ ಬರೆದುಕೊಟ್ಟಿರುವುದಿಲ್ಲ, ನಾವು ಯಾವುದೇ ರೀತಿ ಮಾಲೀಕತ್ವ ಹಾಗೂ ಕಬ್ಜೆಯನ್ನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ಖೊಟ್ಟಿ ದಾಖಲೆಯನ್ನು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಹೆಸ್ಕಾಂ ಇಲಾಖೆಯಿಂದ ಮನೆಗೆ ವಿದ್ಯುತ್ ಸಂಪರ್ಕ ಪಡೆಯುವ ಸಲುವಾಗಿ ಅನುಮತಿ ಪಡೆಯುತ್ತಿರುವುದಾಗಿ ಹೇಳಿ ಬಿಳಿ ಹಾಳೆಯ ಮೇಲೆ ವಾದಿಯ ಸಹಿ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಯ ಮನೆಗೆ ವಿದ್ಯುತ್ ಸಂಪರ್ಕ ಇರುತ್ತದೆ. ಸಾಕ್ಷಿಯು ಮುಂದುವರೆದು ಸನ್ -2018 ರಲ್ಲಿ ಸರಕಾರದ ಉಚಿತ

ಯೋಜನೆಯಲ್ಲಿ ವಿದ್ಯುತ್ ಸಂಪರ್ಕ ಪಡೆದಿರುತ್ತಾರೆಂದು ನುಡಿಯುತ್ತಾರೆ. ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ.

ನಾನು ಹಾಜರುಪಡಿಸಿದ ನಿಡಿ.12 ರಲ್ಲಿ ನಮ್ಮ ತಂದೆ ಹಾಗೂ ದೊಡ್ಡಪ್ಪ ಹಾಗೂ ಇತರರ ಹೆಸರುಗಳು ಜಂಟಿಯಾಗಿ ಇರುತ್ತವೆ ಎಂದರೆ ನಿಜ. ನಿಡಿ.15 ಪೀಟಿ ಶಿಟನ್ನು ಯಾವ ವರ್ಷದಲ್ಲಿ ತೆಗೆಸಿರುತ್ತೀರಿ ಎಂದರೆ ನನಗೆ ಹೇಳಲು ಅಗುವುದಿಲ್ಲ. ನಿಡಿ.22 ನಕಾಶೆಯಲ್ಲಿ ತೋರಿಸದಂತೆ ಸರ್ವೆ ನಂಬರ-20 ರಲ್ಲಿ ಎಷ್ಟು ಹಿಸ್ಸೆಗಳು ಇರುತ್ತವೆ ಎಂದು ನನಗೆ ಹೇಳಲು ಆಗುವುದಿಲ್ಲ.

ಈ ಹಂತದಲ್ಲಿ ವಾದಿ ಪರ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ